# ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ). ಬೆಂಗಳೂರು ಇವರ ನಡಾವಳಿಗಳು

ವಿಷಯ: ವಾಣಿಜ್ಯ ತೆರಿಗೆ ಇಲಾಖೆ, ಕರ್ನಾಟಕದಲ್ಲಿ ಜಿಎಸ್‌ಟಿ ಸಂಶೋಧನಾ ಘಟಕದ ರಚನೆ.

**ಪ್ರಸ್ತಾವನೆ:**

ಜಿಎಸ್‌ಟಿ ಅಧಿನಿಯಮ,2017ರ ಅನುಷ್ಠಾನದ ನಂತರ, ತೆರಿಗೆ ದರಗಳು ಮತ್ತು ಕಾನೂನಿಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗುತ್ತಿದ್ದು ಮತ್ತು ಸ್ಪಷ್ಟೀಕರಣ ಮತ್ತು ಅರ್ಥವಿವರಣೆ ಕೋರಿ ವಿವಿಧ ವ್ಯಾಪಾರ ಸಂಸ್ಥೆಗಳು ಮತ್ತು ಇತರ Stake Holders ರಿಂದ ಮನವಿಗಳನ್ನು ಸ್ವೀಕರಿಸಲಾಗುತ್ತಿದ್ದು ಮತ್ತು ಅದನ್ನು ಪರಿಹರಿಸಲು, ಜಿಎಸ್‌ಟಿ ಪರಿಷತ್ತಿನಲ್ಲಿ Fitment Committee ಮತ್ತು Law Committee ಕಾನೂನು ಸಮಿತಿಗಳನ್ನು ಸ್ಥಾಪಿಸಲಾಗಿದೆ. ಸದರಿ ಸಮಿತಿಗಳಲ್ಲಿ ಜಿಎಸ್‌ಟಿ ದರ ಮತ್ತು ಕಾನೂನಿನ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು, ಅಜೆಂಡಾದ ಆಧಾರದ ಮೇಲೆ ನಿಯತಕಾಲಿಕ ಸಭೆಗಳನ್ನು ನಡೆಸಲಾಗುತ್ತಿದೆ. ಸದರಿ ಸಮಿತಿಗಳ ಮುಂದೆ ಬರುವ ವಿಷಯಗಳಿಗೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರವರಿಗೆ ಸಹಾಯ ಮತ್ತು ನೆರವು ನೀಡುವ ದೃಷ್ಟಿಯಿಂದ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒಂದು ವಿಶೇಷ 'ಜಿಎಸ್‌ಟಿ ಸಂಶೋಧನಾ ಘಟಕ' (GST Research Unit (GRU))ವನ್ನು ರಚಿಸುವ ಅಗತ್ಯತೆ ಇರುತ್ತದೆ. ಈ ಇಲಾಖೆಯಲ್ಲಿ ಅಂತಹ ಸಮಿತಿಯ ಅನುಪಸ್ಥಿತಿಯಲ್ಲಿ ಜಿಎಸ್‌ಟಿಯ ಪರಿಣಾಮಕಾರಿ ಅನುಷ್ಠಾನವು ಕಷ್ಟಕರವಾಗಿದೆ. ಆದ್ದರಿಂದ ಜಿಎಸ್‌ಟಿ ಸಂಶೋಧನಾ ಘಟಕವನ್ನು ರಚಿಸುವ ಅವಶ್ಯಕತೆ ಇರುತ್ತದೆ.

ಆದ್ದರಿಂದ, ಈ ಕೆಳಕಂಡ ಆದೇಶ:

**ಆದೇಶ ಸಂಖ್ಯೆ: ಕೆಜಿಎಸ್‌ಟಿ. ಸಿ.ಆರ್. 37/2023-24, ದಿನಾಂಕ: 17-06-2023.**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಾಣಿಜ್ಯ ತೆರಿಗೆ ಇಲಾಖೆ (ಕರ್ನಾಟಕ), ಬೆಂಗಳೂರು ಇಲ್ಲಿ ಒಂದು ಜಿಎಸ್‌ಟಿ ಸಂಶೋಧನಾ ಘಟಕವನ್ನು ರಚಿಸಲು ಆದೇಶಿಸಲಾಗಿದೆ. ಈ ಇಲಾಖೆಯಲ್ಲಿ ಜಿಎಸ್‌ಟಿ ಸಂಶೋಧನಾ ಸಮಿತಿಯನ್ನು ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತೆ ರಚಿಸಲಾಗಿದೆ.

1. ಶ್ರೀಮತಿ. ಐ.ಸಿ. ಸುಶೀಲಾ ವಾ.ತೆ.ಜಂ.ಆ (ಆಡಳಿತ), ಡಿಜಿಎಸ್‌ಟಿಓ-3, ಬೆಂಗಳೂರು.
2. ಶ್ರೀಮತಿ ಸಹನಾ ಬಳ್ಕಲ್, ವಾ.ತೆ.ಉ.ಆ (ಇ-ಆಡಳಿತ), ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಕರ್ನಾಟಕ, ಬೆಂಗಳೂರು.
3. ಶ್ರೀ ಹೆಚ್.ಡಿ. ರಮೇಶ್, ವಾ.ತೆ.ಉ.ಆ (ಜಾರಿ)-4, ದಕ್ಷಿಣ ವಲಯ, ಬೆಂಗಳೂರು.
4. ಶ್ರೀ ಜೆ.ಜೆ. ಪ್ರಕಾಶ್, ವಾ.ತೆ.ಸ.ಆ, ಎಲ್‌ಜಿಎಸ್‌ಟಿಓ-20, ಡಿಜಿಎಸ್‌ಟಿಓ-1, ಬೆಂಗಳೂರು.
5. ಶ್ರೀ ಹೇಮಂತ್ ಕುಮಾರ್, ವಾ.ತೆ.ಸ.ಆ, (ಪರೀಕ್ಷಾರ್ಥ), ಡಿಜಿಎಸ್‌ಟಿಓ-4, ಬೆಂಗಳೂರು.
6. ಶ್ರೀ ಕಿರಣ್ ಬಿರಾದರ್, ವಾ.ತೆ.ಉ.ಆ (ಲೆಕ್ಕ ಪರಿಶೋಧನೆ)-5.4, ಡಿಜಿಎಸ್‌ಟಿಓ-5, ಬೆಂಗಳೂರು.

ಜಿಎಸ್‌ಟಿ ಸಂಶೋಧನಾ ಘಟಕದ ಸದಸ್ಯರು, ಮಾನ್ಯ ಆಯುಕ್ತರು Fitment Committee ಮತ್ತು Law Committee ಮತ್ತು GST Council ನ ಸಭೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು, ಸಂಕಲನಗೊಳಿಸಲು ಮತ್ತು ಮಾಹಿತಿಯನ್ನು ಪ್ರಸುತ್ತಪಡಿಸಲು ನೆರವನ್ನು ನೀಡತಕ್ಕದ್ದು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ ಮತ್ತು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

17/6/23

ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

**ಪ್ರತಿಯನ್ನು:**

1. ಸಂಬಂಧಪಟ್ಟ ಅಧಿಕಾರಿಗಳಿಗೆ.